ದಿನಾಂಕಃ 15.09.2023 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :ಪ್ರತಿವಾದಿ ಪರ ಶ್ರೀ ಎಸ್.ಡಿ. ವಕೀಲರಿಂದಃ**

ನಾನು 2011 ನೇ ಇಸವಿಯಲ್ಲಿ ವಿವಾಹವಾಗಿದ್ದೇನೆ, ದಿನಾಂಕ ಗೊತ್ತಿಲ್ಲ. ನನ್ನ ತಾಯಿಯ ಊರು ಚಿಕ್ಕಮಗಳೂರು ತಾಲ್ಲೂಕಿನ ಬೂದನಿಕೆ. ನನ್ನ ವಿವಾಹ ದಿ.31.05.2012 ರಲ್ಲಿ ಆಗಿದೆ ಎಂದರೆ ಸರಿ. ನನ್ನ ಮದುವೆಯ ಪೂರ್ವದಲ್ಲಿ ನಾನು ಮುತ್ತಿಗೆಪುರದಲ್ಲಿ ವಾಸಿಸುತ್ತಿರಲಿಲ್ಲ. ದಾವಾ ಸ್ವತ್ತು ಒಟ್ಟು ಕುಟುಂಬದ ಸ್ವತ್ತಾಗಿದ್ದ ಕಾರಣ ಎ.ಸಿ. ನ್ಯಾಯಾಲಯದಲ್ಲಿ ನನ್ನ ಹೆಸರಿಗೆ ಆದ ಮಂಜೂರಾತಿ ವಜಾ ಆಗಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗೂ ಹಕ್ಕು ಇದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತನ್ನು ಮಂಜೂರುಮಾಡುವಂತೆ ಯಾವ ದಿನಾಂಕದಂದು ಅರ್ಜಿ ಸಲ್ಲಿಸಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಎ.ಸಿ. ನ್ಯಾಯಾಲಯದ ಆದೇಶದಂತೆ ನನ್ನ ಹೆಸರಿಗೆ ಆಗಿರುವ ಖಾತೆಯನ್ನು ರದ್ದುಪಡಿಸಲು ಪ್ರತಿವಾದಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಆ ಅರ್ಜಿಯ ವಿಚಾರವಾಗಿ ಗ್ರಾಮಪಂಚಾಯಿತಿಯಿಂದ ನನಗೆ ಏನೂ ಮಾಹಿತಿ ಇಲ್ಲ. ಎ.ಸಿ. ನ್ಯಾಯಾಲಯದ ಆದೇಶದ ಮೇಲೆ ಡಿ.ಸಿ. ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆಯಾ ಎಂದು ನನಗೆ ಗೊತ್ತಿಲ್ಲ. ನನ್ನ ಗಂಡನ ತಂದೆಯ ಹೆಸರು ಸಿದ್ದಯ್ಯ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಈ ಹಿಂದೆ ಒಂದು ಶೀಟಿನ ಮನೆ ಇತ್ತು ಎಂದರೆ ಸರಿಯಲ್ಲ. ಸಿದ್ದಯ್ಯ ರವರ ಜೀವಿತ ಕಾಲದಲ್ಲಿ ಕೃಷಿ ಚಟುವಟಿಕೆಗೆ ಬೇಕಾದ ವಸ್ತುಗಳನ್ನು ಸದರಿ ಶೀಟಿನ ಮನೆಯಲ್ಲಿ ಇರಿಸುತ್ತಿದ್ದರು ಎಂದರೆ ಸರಿಯಲ್ಲ.

ದಾವಾ ಸ್ವತ್ತು ಸರ್ಕಾರಿ ಸ್ವತ್ತು ಆಗಿದ್ದ ಕಾರಣ ಅದಕ್ಕೆ ಸಂಬಂಧಿಸಿದ ಖಾತಾ ನಮ್ಮ ಹೆಸರಿಗೆ ಆಗಿರಲಿಲ್ಲ ಎಂದರೆ ಸರಿ. ಸಿದ್ದಯ್ಯರವರ ಮರಣಾನಂತರ ದಾವಾ ಸ್ವತ್ತು ಅವರ ವಾರಸುದಾರರ ಸ್ವಾಧೀನಾನುಭದಲ್ಲಿ ಇತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಕ್ಕದಲ್ಲಿ ಒಂದು ಶೆಡ್ ಇತ್ತು ಎಂದರೆ ಸರಿಯಲ್ಲ. ಸದರಿ ಶೆಡ್ ನ್ನು ಪ್ರತಿವಾದಿಯು 2008 ನೇ ಇಸವಿಯಲ್ಲಿ ನಿರ್ಮಾಣಮಾಡಿದ್ದರು ಎಂದರೆ ಸರಿಯಲ್ಲ. ಸಿದ್ದಯ್ಯರವರಿಗೆ ರುದ್ರೇಶ, ಪ್ರತಿವಾದಿ, ದುಗ್ಗಯ್ಯ ಮತ್ತು ಮಮತ ಹೆಸರಿನ ಮಕ್ಕಳು ಇದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನ ಮೇಲೆ ಸದರಿರವರುಗಳಿಗೆ ಹಕ್ಕು ಇದೆ ಎಂದರೆ ಸರಿಯಲ್ಲ. ಸಿದ್ದಯ್ಯರವರಿಗೆ ಸಂಬಂಧಸಿದ ಆಸ್ತಿಗಳು ವಿಭಾಗವಾಗಿಲ್ಲ ಎಂದರೆ ಸರಿ.

ಮುತ್ತಿಗೆಪುರ ಗ್ರಾಮದ ಸ.ನಂ.65 ರಲ್ಲಿ 2 ಎಕರೆ 34 ಗುಂಟೆ ಜಮೀನು ಸಿದ್ದಯ್ಯರವರಿಗೆ ಸೇರಿದ್ದು ಎಂದರೆ ಸರಿ. ಸದರಿ ಜಮೀನು ಮತ್ತು ದಾವಾ ಸ್ವತ್ತು ಒಟ್ಟು ಕುಟುಂಬದ ಆಸ್ತಿ ಎಂದರೆ

ಸರಿಯಲ್ಲ. ದಾವಾ ಸ್ವತ್ತಿನ ಪಕ್ಕದಲ್ಲಿ ಇರುವ ಶೆಡ್ಡಿನಲ್ಲಿ ಪ್ರತಿವಾದಿಯು ಅಂಗಡಿ ವ್ಯಾಪಾರ ಮಾಡುವ ಉದ್ದೇಶದಿಂದ ದಿ.27.02.2008 ಮತ್ತು ದಿ.27.09.2016 ರಂದು ಪರವಾನಗೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ಶೆಡ್ ನಲ್ಲಿ ಪ್ರತಿವಾದಿಯು ಅಂಗಡಿ ವ್ಯಾಪಾರ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 2011 ನೇ ಇಸವಿಯ 10 ವರ್ಷ ಪೂರ್ವದಿಂದಲೂ ನನ್ನ ಗಂಡ ದಾವಾ ಸ್ವತ್ತಿನಲ್ಲಿ ಶೀಟಿನ ಛಾವಣಿವುಳ್ಳ ಶೆಡ್ಡನ್ನು ನಿರ್ಮಿಸಿ ವಾಸವಿದ್ದರು ಹಾಗೂ ನಮ್ಮ ವಿವಾಹದ ನಂತರ ಖಾತಾ ಮಾಡಿಸಿಕೊಂಡಿದ್ದರು. ಸದರಿ ಶೆಡ್ಡಿನಲ್ಲಿ ಎರಡು ರೂಂ ಗಳು ಇದ್ದವು. ಆ ಸಮಯದಲ್ಲಿ ನನ್ನ ಗಂಡನ ಹೆಸರಿಗೆ ಖಾತೆ ಇತ್ತ ಎಂದು ನನಗೆ ಗೊತ್ತಿಲ್ಲ. ಸದರಿ ಶೆಡ್ಡಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಲಕ್ಷ್ಮಮ್ಮರವರ ಮನೆ, ಉತ್ತರ-ದಕ್ಷಿಣ ದಿಕ್ಕಿಗೆ ರಸ್ತೆ ಇದೆ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಪ್ರಸ್ತುತ ದಾವೆಯನ್ನು ಸಲ್ಲಿಸಲಾಗಿದೆ.

ದಾವಾ ಸ್ವತ್ತು ಯಾವ ದಿನಾಂಕದಂದು ಮಂಜೂರಾಗಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ 1998-99 ನೇ ಸಾಲಿನಲ್ಲಿ ಮನೆ ನಿರ್ಮಾಣ ಮಾಡಿರುವುದಾಗಿ ಮಂಜೂರಾತಿ ಸಮಯದಲ್ಲಿ ಹೇಳಿಕೆ ನೀಡಿರಬಹುದು ಆದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಹೇಳಿಕೆಯ ನಕಲನ್ನು ತೋರಿಸಿ ಅದರಲ್ಲಿ ಇರುವ ಸಹಿ ತಮ್ಮದು ಎಂದರೆ ಸಾಕ್ಷಿಯು ಒಪ್ಪುತ್ತಾರೆ. ಆದ ಕಾರಣ ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ದಾವಾ ಸ್ವತ್ತಿನಲ್ಲಿ ನಾನು 2017 ನೇ ಇಸವಿಯಲ್ಲಿ ಮನೆ ನಿರ್ಮಿಸಿರುತ್ತೇನೆ. ನನ್ನ ಜನ್ಮದಿನ ಗೊತ್ತಿಲ್ಲ. ಸಾಕ್ಷಿಗೆ ಕೆ.ಎಲ್.ಆರ್. ಅಧಿನಿಯಮ ಕಲಂ.94(ಸಿ) ರಂತೆ ಚೆಕ್ ಲೀಸ್ಟ್ ನ್ನು ತೋರಿಸಲಾಗಿದ್ದು ಸಾಕ್ಷಿಯು ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು.

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಹೆಸರಿಗೆ ಆದ ಮಂಜೂರಾತಿ ವಜಾ ಆಗಿರುವ ವಿಚಾರ ತಿಳಿದಿದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿಯ ಒಟ್ಟು ಕುಟುಂಬದ ಸ್ವತ್ತಾಗಿದ್ದು ಸುಳ್ಳು ಹೇಳಿಕೆ ನೀಡಿ ಮಂಜೂರಾತಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಒಟ್ಟು ಕುಟುಂಬದ ಸದಸ್ಯರು ಸ್ವಾಧೀನದಲ್ಲಿ ಇದ್ದರೂ ಸಹಾ ನಾನೊಬ್ಬಳೇ ಸ್ವಾಧೀನದಲ್ಲಿ ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ಪ್ರತಿವಾದಿ ಮತ್ತು ಅವರ ಸಹೋದರ ಸಹೋದರಿಯರಿಗೆ ಹಕ್ಕು ಇದ್ದರೂ ಸಹಾ ಆ ಬಗ್ಗೆ ಹೇಳದೇ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹೇಳಿದಂತೆ ಪ್ರತಿವಾದಿಯು ನನಗೆ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ. ದಾವಾ

ಸ್ವತ್ತಿನ ಸುತ್ತ ಇರುವ ರಸ್ತೆಯ ಕಡೆಗೆ ಬೇಲಿ ನಿರ್ಮಿಸಿದ್ದೇವೆ. ಪ್ರತಿವಾದಿಯು ಸದರಿ ಬೇಲಿಯನ್ನು ಕೀಳಲು ಪ್ರಯತ್ನಿಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವ ದಿಕ್ಕಿಗೆ ಒಂದು ಶೆಡ್ ಇದ್ದು ಅದು ನನ್ನ ಗಂಡ ನಿರ್ಮಿಸಿದ ಶೆಡ್ಡಾಗಿರುತ್ತದೆ ಹಾಗೂ ಸದರಿ ಶೆಡ್ಡಿನಲ್ಲಿ ನನ್ನ ಗಂಡ ಆಟೋ ನಿಲ್ಲಿಸುತ್ತಾರೆ. ಆ ಶೆಡ್ಡಿನಲ್ಲಿ ಪ್ರತಿವಾದಿಯು ಬಹಳ ಹಿಂದಿನಿಂದಲೂ ಅಂಗಡಿ ವ್ಯಾಪಾರ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಶೆಡ್ ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ ಆದರೆ ಆಟೋ ನಿಲ್ಲಿಸುವಷ್ಟು ಇದ್ದು ಅದಕ್ಕೆ ಸಂಬಂಧಿಸಿದ ಖಾತೆಯು ನನ್ನ ಹೆಸರಿನಲ್ಲಿದೆ. ದಾವಾ ಸ್ವತ್ತು ಮತ್ತು ಸದರಿ ಶೆಡ್ ಗೆ ಸಂಬಂಧಿಸಿದಂತೆ ಒಂದೇ ಖಾತೆಯನ್ನು ಮಾಡಿಕೊಟ್ಟಿದ್ದಾರೆ. ದಾವಾ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.